ಕೂಡ! 'ನೀನೇ ನನ್ನ ಸಂಸ್ಕಾರ ಮಾಡಬೇಕು ಅಂತ ಬರೆದಿದ್ದರು, ಸರಸ್... ಅಂತ್ಯೇಷ್ಟಿ ಸಂಸ್ಕಾರ ಅಂತೊಂದಿದೆ. ಆ ಪ್ರಕಾರವೇ ಆಗಬೇಕು – ಎಂದು ಬರೆದು, ಯಾವುದೋ ಒಬ್ಬ ಪುರೋಹಿತರ ನಂಬರ್ ಕೊಟ್ಟಿದ್ದರು... ಆತನಿಗೆ ಫೋನು ಮಾಡಿದರೆ, ಅವರ ಮನೆಯಲ್ಲೂ ಒಂದು ಸಾವುಂಟಾಗಿದೆ ಅಂತ ಹೇಳಿದರು. ಆತ ಇನ್ನೊಂದು ನಂಬರು ಕೊಟ್ಟರು... ಸರಿ ಈ ಪುರೋಹಿತನ ಕೈಹಿಡಿದು ನಿನ್ನೆ ಅಲಸೂರಿನ ರುದ್ರಭೂಮಿಯಲ್ಲಿ ಬೆಂಕಿ ಹಚ್ಚಿದ್ದು ಆಯಿತು! ನಾನೇ ಚಿತೆಗೆ ಅಗ್ನಿಸ್ಪರ್ಶ ಮಾಡಿದ್ದು... ನಾಳೆ ಪಶ್ಚಿಮವಾಹಿನಿಗೆ ಬೂದಿ ತಗೊಂಡು ಹೋಗುತಾ ಇದ್ದೀವಿ...'

'ಓಹ್ ಸೋ ಸ್ಸಾರೀ, ಶರ್ಲೀ... ಈಗ ನನ್ನಿಂದ ಏನಾಗಬೇಕು ಹೇಳು?'

'ವೆಲ್ಲ್... ಅನೂಪ ಹೇಳಿದ – ನಿಮ್ಮ ಮನೆಯ ಹತ್ತಿರ ಆರ್ಯಾವರ್ತ ಅಂತೇನೋ ಜಾಗ ಇದೆಯಲ್ಲ, ಅಲ್ಲಿ ಕೇಟ್‌ನ ಮುಂದಿನ ಸಂಸ್ಕಾರಗಳನ್ನ ಮಾಡಿಸಬೇಕು... ಅಲ್ಲಿಯ ಮ್ಯಾನೇಜ್‌ಮೆಂಟು ನಿನಗೆ ಗೊತ್ತಿದೆಯಂತಲ್ಲ... ಹೆಲ್ಪ್ ಮಾಡೋಕ್ಕಾಗುತ್ತಾ?'

'ಓಹ್... ಓಕೆ. ಆರ್ಯಾವರ್ತದ ಮಂದಿ ನನಗಿಂತ ನನ್ನ ಅಮ್ಮನಿಗೆ ಮತ್ತು ಹೆಂಡತಿಗೆ ಚೆನ್ನಾಗಿ ಗೊತ್ತು... ಕೇಳಿನೋಡುತೀನಿ...'

'ಸುಮ್ಮನೆ ಕೇಳೋದಲ್ಲ, ಸರಸ್... ನಾನು – ಶರ್ಲೀ ವರ್ಕಿ ಎಂಬ ಕ್ರಿಶ್ಚಿಯನ್ ಹೆಂಗಸು ಈ ಸಂಸ್ಕಾರದ ಕರ್ತೃ ಅಂತ ಚೆನ್ನಾಗಿ ಅವರಿಗೆ ತಿಳೀಹೇಳಬೇಕು... ತಿಳಿಹೇಳಿ ಒಪ್ಪಿಸಬೇಕು... ಆಗುತ್ತಾ?!'

'....'

'ಇದು ನನಗೆ ತುಂಬಾ ಇಂಪಾರ್ಟೆಂಟು, ಸರಸ್... ಕೇಟ್ ಆತ್ಮಕ್ಕೆ ಶಾಂತಿಯೊದಗಿಸೋದು ನನ್ನ ಕರ್ತವ್ಯ, ಅಲ್ಲವಾ?!' ಗಂಡೆದೆಯುಳ್ಳ ಹೆಣ್ಣು, ಈಗಲಂತೂ ಬಿಕ್ಕಿ ಬಿಕ್ಕಿ ಅಳತೊಡಗಿದಳು!

ನನಗೋ – ಈಗ ಪೀಕಲಾಟವೇ ಮೊದಲಾಯಿತು. ಈವರೆಗೆ ಯಾರೆಂದು ಸಹ ಗೊತ್ತಿರದ 'ಆರ್ಯಾವರ್ತ'ದ ಮಂದಿಯೊಡನೆ, ಈಗ ಮಾತನಾಡಿ, ಈ ಕುರಿತು ಶಿಫಾರ್ಸು ಮಾಡುವುದೆಂದರೆ?! ಸ್ವತಃ ನಂಬದ ವಿಚಾರವನ್ನು ಇನ್ನೊಬ್ಬರಿಗೆ ಏರ್ಪಡಿಸುವುದೆಂದರೆ?! ಫಜೀತಿ ತಾನೇ?! ನನ್ನ ಅಮ್ಮ–ಹೆಂಡತಿಯರ ಕಣ್ಣಿನಲ್ಲಿರಲಿ, ನನ್ನ ಮಟ್ಟಿಗೂ ಇದು ಬೂಟಾಟಿಕೆಯೇ ಅಲ್ಲವೇ? ಯಾರಿಗಾದರೂ ಹಾಗೇ ಅನಿಸುವುದಲ್ಲವೆ? ಪರಿಶುದ್ಧ ಹಿಪೋಕ್ರೆಸಿ ತಾನೇ?!

ಎಲ್ಲಕ್ಕಿಂತ, ನನ್ನನ್ನು ಕಾಡಿದ್ದು ಈ ಇನ್ನೊಂದು ಸಂಗತಿ! ನಾನಾದರೂ – ಇವೊತ್ತು, ನನಗೆ ತೀರಾ ಬಾಧ್ಯಸ್ಥಿಕೆಯಿರುವ ಪಿತೃಗಳನ್ನು ಕುರಿತಾದ ತರ್ಪಣಾದಿ ಸಂತರ್ಪಣೆಯೂ ಒಲ್ಲೆಂದು ತಲೆಕೆಡಿಸಿಕೊಂಡಿರುವಾಗ – ಒಬ್ಬ ಹೆಣ್ಣು ಹೆಂಗಸು... ಅದೂ ಒಬ್ಬ ಕ್ರಿಶ್ಚಿಯನ್ ಹೆಣ್ಣು, ತನ್ನೊಡನೆ ರಕ್ತ ಹಂಚಿಕೊಂಡಿಲ್ಲದ ಬರೇ ಪರಿಚಯಸ್ಥ 'ಬಂಧು'ವೊಬ್ಬನ ಅಂತ್ಯೇಷ್ಟಿಯನ್ನು – ತನ್ನ ಮನೆಯ ಕೆಲಸವೆನ್ನುವಷ್ಟು ಹಚ್ಚಿಕೊಂಡಿದ್ದಾಳೆಂಬ ವಿಷಯ!!

ವಿಚಿತ್ರ ತಾನೇ?!

ಯಾಕೋ ಕಾಣೆ, ನನ್ನೊಳಗೇ ಶರ್ಲೀ ವರ್ಕಿಯ ಬಗ್ಗೆ ಹೆಮ್ಮೆ ತೂಗಿಬಂತು. ಒಡನೆಯೇ ಕೊರಳುಕ್ಕಿಕೊಂಡು ಉಂಟಾದ ಒಂದು ನಿಸ್ಸೀಮ ಗದ್ಗದದಿಂದಾಗಿ – ನನ್ನೆಲ್ಲ ಮಾತೂ ಮನಸ್ಸೂ ಒಟ್ಟೊಟ್ಟಿಗೆ ಮುಗ್ಗರಿಸಿಕೊಂಡವು!

ಕಡೆಯಲ್ಲಿ, 'ಇವೊತ್ತು ಬೆಳಿಗ್ಗೆ ಕೇಶಮುಂಡನ ಕೂಡ ಮಾಡಿಸಿಕೊಂಡಿದ್ದೀನಿ...' ಅಂತಲೂ ಶರ್ಲೀ ವರ್ಕಿ ಹೇಳಿದಾಗ – ಮಾತಿರಲಿ, ಮೌನವೂ ತೋಚದೆಯೆ ಸತಾಯಿಸಿತು!

ಕೆಲಕಾಲ ಮೌನವನ್ನು ತಾಳಿಕೊಂಡು ಉಳಿದು, ಕೊನೆಗೆ – 'ಸರಿ... ನಾನು ನನ್ನ ಅಮ್ಮನ ಜೊತೆ ಮಾತಾಡಿ ವಾಪಸು ಬರುತೀನಿ, ಶರ್ಲೀ...' ಎಂದು ಹೇಳಿ ಫೋನು ಬಡಿಚೆದೆ.